# ಅಮ್ಮನ ತಿಂಡಿಯೂ ಹೃತಿಕ್‌ಗೆ ವಿಶೇಷ



ಸೆಲೆಬ್ರಿಟಿಗಳು ಸಣ್ಣ ಸಣ್ಣ ಸಹಜ ಸುಖಗಳನ್ನೆಲ್ಲ ಮಹದಾನಂದದ ಕ್ಷಣವೆಂದು ಬಿಂಬಿಸಿಕೊಳ್ಳುವುದು ಸಹಜವೇ ಆಗಿರುವ ದಿನವಿದು. ಹೃತಿಕ್ ರೋಷನ್ ಈಚೆಗೆ ಇಂಥದೇ ಸಹಜ ದಿನವೊಂದನ್ನು ಅಪರೂಪವೇ ಹೌದೆನ್ನುವಂತೆ ಇನ್‌ಸ್ಟಾಗ್ರಾಂನಲ್ಲಿ ಹಾಕಿಕೊಂಡರು. ಅಲ್ಲಿ ಅವರು ಹಾಕಿದ ಫೋಟೊ ಒಂದು ಕತೆಯನ್ನೇ ಹೇಳುವಂತಿತ್ತು.

ಅನೌಪಚಾರಿಕ ಎನ್ನಬಹುದಾದ ಉಡುಗೆಯಲ್ಲಿದ್ದ ಹೃತಿಕ್ ವದನದ ಮೇಲೆ ಸುಂದರ ನಗು. ಮುಖದ ತುಂಬಾ ಪೊಗದಸ್ತಾಗಿ ಬೆಳೆಯುತ್ತಿರುವ ಗಡ್ಡ–ಮೀಸೆ. ಕೈಯಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿರುವಂತೆ ಒಂದು ಮೊಬೈಲ್. ಕುಳಿತ ಸ್ಥಳದ ಹಿಂಭಾಗದಲ್ಲೊಂದು ಮೊಟ್ಟೆಯಾಕಾರದ ದೊಡ್ಡ ಕನ್ನಡಿ. ಅವರು ಕುಳಿತ ಕುರ್ಚಿಯ ಪಕ್ಕದಲ್ಲೇ ಊಟದ ಮೇಜು. ಅದರ ಮೇಲೆ ಸಣ್ಣ ಸಣ್ಣ ಬಾಟಲುಗಳಲ್ಲಿ ಅದೇನೆಲ್ಲ ಇವೆಯೋ ಗೊತ್ತಿಲ್ಲ. ಅನತಿ ದೂರದಲ್ಲಿ ಬಾಲ್ಕನಿ. ಅಲ್ಲಿ ಸೂರ್ಯರಶ್ಮಿಗೆ ಮುಖವೊಡ್ಡಿಕೊಂಡ ಅವರ ತಾಯಿ ಪಿಂಕಿ ರೋಷನ್.

ಹೃತಿಕ್ ಇಂಥದೊಂದು ಫೋಟೊವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದರು. 'ಬುಧವಾರದ ಮುಂಜಾನೆ ಭಾನುವಾರದ ಮುಂಜಾನೆಯಂತೆ ಹೀಗೆ ಇರುವುದು ಎಷ್ಟು ಚೆನ್ನ? ಸೋಮಾರಿಯಂತೆ ನಿಧಾನವಾಗಿ ಬೆಳಗಿನ ಉಪಾಹಾರವನ್ನು ಅಮ್ಮನ ಪ್ರೀತಿಯೊಟ್ಟಿಗೆ ಸವಿಯುವುದೇ ಸಂತಸ' ಎಂಬರ್ಥದ ಸಾಲಿನ ಚಿತ್ರಶೀರ್ಷಿಕೆಯನ್ನು ಅವರು ಬರೆದಿದ್ದರು.

ತಮ್ಮ ವರ್ಕ್‌ಔಟ್ ವಿಡಿಯೊಗಳನ್ನೇ ಹೆಚ್ಚಾಗಿ ಪೋಸ್ಟ್ ಮಾಡುತ್ತಿದ್ದ ಹೃತಿಕ್ ತಾಯಿಪ್ರೀತಿಯ ಈ ವಿಡಿಯೊ ಕಂಡು ನಟ ಕುನಾಲ್ ಕಪೂರ್ ಹೃದಯದ ಎಮೋಜಿಗಳ ರಾಶಿಯನ್ನೇ ಪ್ರತಿಕ್ರಿಯೆಯ ರೂಪದಲ್ಲಿ ಪೋಸ್ಟ್ ಮಾಡಿದ್ದರು.

ಹೃತಿಕ್ ಈಗಲೂ ಬಿಡುವಿಲ್ಲದಂತೆ ಸಿನಿಮಾಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. 'ಫೈಟರ್' ಅವರು ಸಹಿ ಮಾಡಿರುವ ಹಿಂದಿ ಚಿತ್ರ. ದೀಪಿಕಾ ಪಡುಕೋಣೆ ಅದರಲ್ಲಿ ನಾಯಕಿಯಾಗಿ ನಟಿಸಲಿದ್ದು, ಸಿದ್ಧಾರ್ಥ್ ಆನಂದ್ ನಿರ್ದೇಶನ ಮಾಡಲಿದ್ದಾರೆ. ಗಾಳಿಯಲ್ಲಿ ತೇಲುತ್ತಾ ಮಾಡುವ ಮೈನವಿರೇಳಿಸುವ ಸಾಹಸದ ದೃಶ್ಯಗಳನ್ನು ಆ ಸಿನಿಮಾ ಒಳಗೊಳ್ಳಲಿದೆಯಂತೆ.

ಇದಲ್ಲದೆ 'ವಿಕ್ರಂ–ವೇದ' ತಮಿಳು ಚಿತ್ರದ ಹಿಂದಿ ರೀಮೇಕ್‌ನಲ್ಲೂ ಸೈಫ್ ಅಲಿ ಖಾನ್ ಜತೆ ಅವರು ನಟಿಸುವುದು ನಿಕ್ಕಿಯಾಗಿದೆ.

■ **ವಿಶಾಖ ಎನ್.**

# ಜೂನಿಯರ್ ಎನ್‌ಟಿಆರ್‌ಗೆ ಆಲಿಯಾ ನಾಯಕಿ?



ಚಕಚಕನೆ ಸಿನಿಮಾಗಳನ್ನು ಮಾಡುತ್ತಾ, ಹಿಟ್ ಮೇಲೆ ಹಿಟ್‌ಗಳನ್ನು ಕೊಟ್ಟ ಜೂನಿಯರ್ ಎನ್‌ಟಿಆರ್ 'ಆರ್‌ಆರ್‌ಆರ್'ಗಾಗಿ ತಮ್ಮನ್ನು ತಾವು ದೀರ್ಘಾವಧಿ ಒಪ್ಪಿಸಿಕೊಂಡಿದ್ದರು. ನಿರ್ದೇಶಕ ರಾಜಮೌಳಿ ಆ ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್ ವರ್ಚಸ್ಸನ್ನು ಚೆನ್ನಾಗಿಯೇ ಬಳಸಿಕೊಂಡಿದ್ದಾರೆ ಎನ್ನುವ ಮಾತಿದೆ. ಕೋವಿಡ್ ಅಲೆಗಳ ಕಾರಣದಿಂದಾಗಿ ಚಿತ್ರೋದ್ಯಮದ ಚಟುವಟಿಕೆ ಮಂದಗತಿಯಲ್ಲಿ ಸಾಗುತ್ತಿರುವುದೇನೋ ನಿಜ. ಹಾಗೆಂದು ಜೂನಿಯರ್ ಎನ್‌ಟಿಆರ್ ವಿರಮಿಸುತ್ತಿಲ್ಲ. ಅವರು ಸದ್ಯಕ್ಕೆ 'ಎನ್‌ಟಿಆರ್30' ಎಂದು ಶೀರ್ಷಿಕೆ ಇರುವ ತೆಲುಗು ಚಿತ್ರವೊಂದರಲ್ಲಿ ನಟಿಸಲು ಒಪ್ಪಿದ್ದಾರೆ. 'ಭರತ್ ಅನೆ ನೇನು', 'ಶ್ರೀಮಂತುಡು' ತರಹದ ಯಶಸ್ವಿ ತೆಲುಗು ಚಿತ್ರಗಳನ್ನು ಕೊಟ್ಟ ಕೊರಟಾಲ ಶಿವ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಸುಧಾಕರ್ ಮಿಕ್ಕಿಲಿನೇನಿ ಹಾಗೂ ನಂದಮೂರಿ ಕಲ್ಯಾಣ್ ರಾಮ್ ನಿರ್ಮಿಸಲಿರುವ ಈ ಚಿತ್ರ ಇಡೀ ಭಾರತದ ಮಾರುಕಟ್ಟೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಾಗಲಿದೆಯಂತೆ.

ಕಿಯಾರಾ ಅಡ್ವಾಣಿ ಅವರನ್ನು ಚಿತ್ರದ ನಾಯಕಿಯಾಗಿ ಆಯ್ಕೆ ಮಾಡಬೇಕು ಎಂದು ನಿರ್ದೇಶಕರು ಮೊದಲು ಅಂದುಕೊಂಡಿದ್ದರು. ಸಮಂತಾ ರುತ್ ಪ್ರಭು ಹೆಸರು ಕೂಡ ಚರ್ಚೆಯಲ್ಲಿ ತೇಲಿಬಂದಿತ್ತು. 'ಆರ್‌ಆರ್‌ಆರ್' ಚಿತ್ರದ ನಂತರ ತೆಲುಗು ಸಿನಿಮಾರಂಗದ ವ್ಯಾಪಕತೆಯನ್ನು ಅರಿತಿರುವ ಆಲಿಯಾ ಭಟ್ ಈ ಚಿತ್ರಕ್ಕೂ ನಾಯಕಿಯಾಗಿ ಗೊತ್ತಾಗಿದ್ದಾರೆ ಎನ್ನುವ ಮಾತು ಹರಿದಾಡುತ್ತಿದೆ. ನಿರ್ದೇಶಕರಾಗಲೀ, ನಿರ್ಮಾಪಕರಾಗಲೀ ಈ ವಿಷಯವನ್ನು ಇನ್ನೂ ಸ್ಪಷ್ಟಪಡಿಸಿಲ್ಲ.

ಎಲ್ಲವೂ ಅಂದುಕೊಂಡಂತೆ ಆದರೆ, ಮುಂದಿನ ವರ್ಷ ಏಪ್ರಿಲ್‌ನಲ್ಲಿ ಜೂನಿಯರ್ ಎನ್‌ಟಿಆರ್ ಹೊಸ ಚಿತ್ರ ತೆರೆಕಾಣುವ ನಿರೀಕ್ಷೆ ಇದೆ. ■

